**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ರಮೇಶ್‌ಬಾಬು (ತುಮಕೂರು) ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ಸೂಚನೆ:**

ರಾಜ್ಯದಲ್ಲಿರುವ ಅನೇಕ ಮಹಾನಗರ ಪಾಲಿಕೆಗಳಲ್ಲಿ ತುಮಕೂರು ಮಹಾನಗರ ಪಾಲಿಕೆ ಒಂದು ಪ್ರಮುಖ ಮಹಾನಗರ ಪಾಲಿಕೆಯಾಗಿದ್ದು, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿರುತ್ತದೆ. ತುಮಕೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ನೂರಾರು ವಾಣಿಜ್ಯ ಕಟ್ಟಡಗಳಿಗೆ ಮತ್ತು ವಾಣಿಜ್ಯೇತರ ಕಟ್ಟಡಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವ ಸಂದರ್ಭದಲ್ಲಿ, ಕಟ್ಟಡದ ಕಾಮಗಾರಿಯ ನಂತರ ಒಸಿ ಮತ್ತು ಸಿಸಿ ನೀಡುವ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಇಂಜಿನಿಯರ್‌ಗಳು ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತಾರೆ. ಇದರಿಂದ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನೂರಾರು ವಾಣಿಜ್ಯ ಕಟ್ಟಡಗಳು ಕಾನೂನು ಬಾಹಿರವಾಗಿ ತಲೆ ಎತ್ತಿರುತ್ತವೆ. ಮಹಾನಗರ ಪಾಲಿಕೆಯ ಇಂಜಿನಿಯರ್‌ಗಳ ವೈಫಲ್ಯದಿಂದ ತುಮಕೂರು ನಗರದ ವ್ಯವಸ್ಥಿತ ನಿರ್ಮಾಣಕ್ಕೆ ತೊಂದರೆಯಾಗಿರುವುದರ ಜೊತೆಗೆ ಅಕ್ರಮ ಕಟ್ಟಡಗಳು ನಿರ್ಮಾಣವಾಗಿ ಪಾಲಿಕೆಯ ಕೋಟ್ಯಾಂತರ ರೂಪಾಯಿ ಆದಾಯಕ್ಕೆ ದಕ್ಕೆಯಾಗಿರುತ್ತದೆ. ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಿಯಮ ಮೀರಿ ವಾಣಿಜ್ಯ ಕಟ್ಟಡಗಳು ನಿರ್ಮಾಣವಾಗಲು ಮತ್ತು ಪಾಲಿಕೆಯ ಆದಾಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳೇ ನೇರ ಹೊಣೆಗಾರರಾಗಿದ್ದು, ರಾಜ್ಯ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ತುಮಕೂರು ಮಹಾನಗರ ಪಾಲಿಕೆಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳ ಮೇಲೆ ತನಿಖೆ ಮಾಡಿ ಕ್ರಮ ಕೈಗೊಳ್ಳಲು ಈ ಸದನದ ಮೂಲಕ ಸರ್ಕಾರದ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

ತುಮಕೂರು ಮಹಾನಗರ ಪಾಲಿಕೆಯಲ್ಲಿ ಕಳೆದ ಮೂರು ವರ್ಷಗಳಿಂದ occupancy certificate ಕೋರಿ ಸ್ವೀಕೃತವಾಗಿರುವ ಒಟ್ಟು 68 ಅರ್ಜಿಗಳನ್ನು ಪರಿಶೀಲಿಸಿ, ನಿಯಮಾನುಸಾರ ನಿರ್ಮಿಸಲಾಗಿರುವ ಕೇವಲ 06 ಸಂಖ್ಯೆಯ ಕಟ್ಟಡಗಳಿಗೆ occupancy certificate ಅನ್ನು ನೀಡಲಾಗಿದ್ದು, ನಿಯಮ ಬಾಹಿರವಾಗಿ ನಿರ್ಮಿಸಲಾಗಿರುವ ಕಟ್ಟಡಗಳಿಗೆ occupancy certificate ನೀಡಲಾಗಿರುವುದಿಲ್ಲ. ಪಾಲಿಕೆ ವತಿಯಿಂದ ಯಾವುದೇ ನಿಯಮ ಉಲ್ಲಂಘನೆ ಮಾಡಿ ಒಸಿ ಮತ್ತು ಸಿಸಿ ನೀಡಿರುವುದಿಲ್ಲ, ಮುಂದುವರೆದು, ಅನುಮೋದಿತ ಕಟ್ಟಡ ನಕ್ಷೆಯನ್ನು ಉಲ್ಲಂಘಿಸಿ ನಿರ್ಮಾಣವಾಗುತ್ತಿರುವುದನ್ನು ನಿಯಂತ್ರಿಸಲು ಕಟ್ಟಡ ಪರವಾನಗಿ ನೀಡಿದ ನಂತರ, ಸ್ಥಳ ಪರಿಶೀಲಿಸಿ, plinth level certificate ಅನ್ನು ನೀಡುವ ಬಗ್ಗೆ ವಾರ್ಡ್ ಅಭಿಯಂತರಗಳಿಗೆ ದಿನಾಂಕ 03-03-2026ರಂದು ಕಚೇರಿ ಆದೇಶ ನೀಡಲಾಗಿರುತ್ತದೆ, ಆದಾಗಿಯೂ ಸಹ ಯಾವುದೇ ಕಟ್ಟಡವನ್ನು ನಿಯಮಬಾಹಿರವಾಗಿ ನಿರ್ಮಿಸಿದ ಬಗ್ಗೆ ಕಂಡುಬಂದಲ್ಲಿ, ಅಂತಹ ಕರ್ತವ್ಯ ಲೋಪವೆಸಗಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

**ಕಡತ ಸಂಖ್ಯೆ: ನಅಇ 27 ತುಮಹಾ 2026 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು